**PW-1**

ದಿನಾಂಕ **18.01.2021** ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆ**</u> **:** ಶ್ರೀಮತಿ ಎ ಆರ್ ಎ ವಕೀಲರಿಂದ **:**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಮತ್ತು ಅದರಲ್ಲಿರುವ ಸಂಗತಿಗಳು ಸರಿ ಇರುತ್ತವೆ ಹಾಗೂ ಅವುಗಳನ್ನು ನಾನೇ ಹೇಳಿ ಖುದ್ದಾಗಿ ಬರೆಯಿಸಿರುತ್ತೇನೆ.

ಮುದ್ರಾಡಿ ಗ್ರಾಮದ ಸ.ನಂ.**68/1** ರ **2015/16** ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, ಮುದ್ರಾಡಿ ಗ್ರಾಮದ ಸ.ನಂ.**68/2** ರ **2015/16** ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**2** ಎಂದು, ಮುದ್ರಾಡಿ ಗ್ರಾಮದ ಸ.ನಂ.**68/3** ರ **2015/16** ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**3** ಎಂದು, ದಿಃ**31.12.2011** ರಂದು ನೀಡಿದ ನಮೂನೆ-**10** ರ ದೃಢಿಕೃತಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**4** ಎಂದು, ದಿಃ**31.12.2011** ರಂದು ಟಿ ಆರ್ ಎಲ್ ಪ್ರಕರಣ ಸಂಖ್ಯೆ **126/76-77** ರ ಪ್ರಕರಣದ ಆದೇಶದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**5** ಎಂದು ಗುರುತಿಸಲಾಯಿತು.

ಮುಂದುವರಿದು ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ